ವಿಧಾನಸಭೆ ಸದಸ್ಯರಾದ ಡಾ: ಮಹದೇವಪ್ಪ ಹೆಚ್.ಸಿ. ಯವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 563ಕ್ಕೆ ಅನುಬಂಧ – 1

1. ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮದ ಅಡಿಯಲ್ಲಿರುವ ಯೋಜನೆಗಳು

ಅ) ಸ್ವಾವಲಂಬನೆ ಸಾಲ ಮತ್ತು ಸಹಾಯಧನ ಯೋಜನೆ

ಆ) ಅರಿವು (ವಿದ್ಯಾಭ್ಯಾಸ) ಸಾಲ ಯೋಜನೆ

ಇ) ಶ್ರಮಶಕ್ತಿ ಯೋಜನೆ

ಈ) ಗಂಗಾ ಕಲ್ಯಾಣ ಯೋಜನೆ

ಉ) ಮೈಕ್ರೋ ಸಾಲ ಮತ್ತು ಸಹಾಯಧನ ಯೋಜನೆ

2. ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ನಿರ್ದೇಶನಾಲಯದಲ್ಲಿನ ಯೋಜನೆಗಳು

ಅ) ಸಮುದಾಯ ಭವನ, ಶಾದಿಮಹಲ್ ನಿರ್ಮಾಣ

ಆ) ಹಾಸ್ಟಲ್ ಕಟ್ಟಡ ನಿರ್ಮಾಣ

ಇ) ಮೊರಾರ್ಜಿ ದೇಸಾಯಿ ವಸತಿ ಶಾಲೆಗಳ ಕಟ್ಟಡಗಳು

ಈ) ಅಲ್ಪಸಂಖ್ಯಾತರ ಸಂಸ್ಥೆಗಳಿಂದ ವಿದ್ಯಾರ್ಥಿನಿಲಯಗಳ ಕಟ್ಟಡ ನಿರ್ಮಾಣ

ಉ) ಹೊಸ ಮೊರಾರ್ಜಿ ದೇಸಾಯಿ ನಿವಾಸಿ ವಸತಿ ಶಾಲೆಗಳು

ಊ) ಅಲ್ಪಸಂಖ್ಯಾತರಿಗಾಗಿ ಕೌಶಲ್ಯ ಅಭಿವೃದ್ಧಿ ಯೋಜನೆ

ಋ) ಸರ್ಕಾರಿ ಅಲ್ಪಸಂಖ್ಯಾತರ ಶಾಲೆಗಳಿಗೆ ಶಿಕ್ಷಣ ಮತ್ತು ಕಲಿಕೆ ಸಾಧನೆಗಳು

ಎ) ಅಲ್ಪಸಂಖ್ಯಾತರ ವಿದ್ಯಾರ್ಥಿಗಳಿಗೆ ಉತ್ತೇಜನ

ಏ) ಅಲ್ಪಸಂಖ್ಯಾತರ ಹೊಸ ವಿದ್ಯಾರ್ಥಿನಿಲಯಗಳ ಪ್ರಾರಂಭ

564 ಡಾ: ಮಹದೇವಪ್ಪ ಹೆಚ್.ಸಿ. (ಟಿ. ನರಸೀಪುರ (ಎಂ.ಎಲ್.ಎ.) ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಒಟ್ಟು ಎಷ್ಟು ಮದರಾಸಗಳಿವೆ? ಯಾವ ಯಾವ ಜಿಲ್ಲೆಗಳಿವೆ;

ಆ) ಈ ಮದರಾಸಗಳಲ್ಲಿ ಎಷ್ಟು ವಿದ್ಯಾರ್ಥಿಗಳು ಯಾವ ಯಾವ ತರಗತಿಗಳಲ್ಲಿ ಯಾವ ಯಾವ ವಿಷಯಗಳಲ್ಲಿ ವ್ಯಾಸಂಗ ಮಾಡುತ್ತಿದ್ದಾರೆ;

ಇ) ಈ ಮದರಾಸಗಳಿಗೆ ರಾಜ್ಯ ಹಾಗೂ ಕೇಂದ್ರ ಸರ್ಕಾರಗಳಿಂದ ಒದಗಿಸಲಾಗಿರುವ ಅನುದಾನವೆಷ್ಟು; ಅದರಲ್ಲಿ ಎಷ್ಟು ಹಣವನ್ನು ಯಾವ ಯಾವ ಉದ್ದೇಶಕ್ಕಾಗಿ ನಿಗದಿಪಡಿಸಲಾಗಿದೆ;

ಈ) ನಿಗದಿಪಡಿಸಲಾಗಿರುವ ಅವಧಿಯಲ್ಲಿ ನೀಡಿರುವ ಅನುದಾನವನು ಸದ್ಬಳಕೆ ಮಾಡಲಾಗಿದೆಯೇ;

ಉ) ಹಾಗಿಲ್ಲದಿದ್ದಲ್ಲಿ ಕಾರಣವೇನು? ಈ ಸಂಬಂಧವಾಗಿ ಸಮಗ್ರ ಮಾಹಿತಿಯನ್ನು ನೀಡುವುದು?

ಡಾ: ಮಹದೇವಪ್ಪ ಹೆಚ್.ಸಿ. (ಟಿ. ನರಸೀಪುರ)

ಅ) ರಾಜ್ಯದಲ್ಲಿ ಒಟ್ಟು 103 ಅನುದಾನ ರಹಿತ ಅರೇಬಿಕ್ ಮದರಾಸಗಳು ಇರುತ್ತವೆ ಹಾಗೂ 220 ಶಾಶ್ವತ ಅನುದಾನ ರಹಿತ ಶಾಲೆಗಳಿರುತ್ತವೆ.

1) ಗುಲ್ಬರ್ಗಾ 2) ವಿಜಾಪುರ 3) ಬಾಗಲಕೋಟೆ 4) ಚಿಕ್ಕೋಡಿ
5) ಬೆಳಗಾಂ 6) ಬೀದರ್ 7) ರಾಯಚೂರು 8) ಯಾದಗಿರಿ
9) ಹಾವೇರಿ 10) ಧಾರವಾಡ 11) ಚಿಕ್ಕಬಳ್ಳಾಪುರ 12) ಕಾರವಾರ
13) ತುಮಕೂರು 14) ಕೋಲಾರ ಮತ್ತು ಬೆಂಗಳೂರು ದಕ್ಷಿಣ ಜಿಲ್ಲೆಗಳಿರುತ್ತವೆ.

ಆ) ಅರೇಬಿಕ್ ಅನುದಾನ ಸಂಹಿತೆಯ ಪ್ರಕಾರ ಮದರಸಾಗಳಲ್ಲಿನ ವಿವಿಧ ಹಂತದ ಶೈಕ್ಷಣಿಕ ವರ್ಷಗಳಲ್ಲಿ ಕೆಳಕಂಡಂತೆ ವಿದ್ಯಾರ್ಥಿಗಳು ದಾಖಲಾಗುವ ಅವಕಾಶವಿರುತ್ತದೆ.

ತಹತ್ತಾನಿಯಾ 3 ವರ್ಷ (ಪ್ರಾಥಮಿಕ) 20x3 = 60
ಉಸ್ತಾನಿಯಾ 2 ವರ್ಷ (ಮಾಧ್ಯಮಿಕ) 15x2 = 30
ಫೌಖಾನಿಯಾ 3 ವರ್ಷ (ಪ್ರೌಢ) 10x3 = 30
ಅಫ್‌ಜಲ್ ಉಲ್ ಊಲ್ಮಾ ಮಾದ್ಯಮ 3 ವರ್ಷ 6 x 3 = 18
ಅಫ್‌ಜಲ್ ಉಲ್ ಊಲ್ಮಾ ಅಂತಿಮ 2 ವರ್ಷ 4 x 2 = 8
(ಒಟ್ಟು 146 ವಿದ್ಯಾರ್ಥಿಗಳಿಗೆ ದಾಖಲಾಗುವ ಅವಕಾಶವಿರುತ್ತದೆ.)

ರಾಜ್ಯದಲ್ಲಿರುವ 103 ಅನುದಾನ ರಹಿತ ಅರೇಬಿಕ್ ಮದರಸಾಗಳಲ್ಲಿ 12,360 ಮಕ್ಕಳು ಅಧ್ಯಯನ ಮಾಡುತ್ತಿದ್ದಾರೆ.

ಶಿಕ್ಷಣ ಇಲಾಖೆ ನಿಗದಿಪಡಿಸಿರುವ ಪಠ್ಯಕ್ರಮ ಮತ್ತು ಪಠ್ಯವಸ್ತುವಿನಂತೆ ಈ ಶಾಲೆಗಳಲ್ಲಿ ಅರೇಬಿಕ್ ಮತ್ತು ಪರ್ಶಿಯನ್ ಧಾರ್ಮಿಕ ವಿಷಯಗಳನ್ನು ವ್ಯಾಸಂಗ ಮಾಡುತ್ತಿರುತ್ತಾರೆ.

ಇ) ಮದರಸಾಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಶಿಕ್ಷಕರುಗಳ ವೇತನಕ್ಕಾಗಿ ರಾಜ್ಯ ಸರ್ಕಾರವು ಜಿಲ್ಲಾ ಪಂಚಾಯತ್ ಲೆಕ್ಕ ಶೀರ್ಷಿಕೆಯಡಿ ಅನುದಾನವನ್ನು ಬಿಡುಗಡೆ ಮಾಡಿರುತ್ತದೆ.

ಕೇಂದ್ರ ಸರ್ಕಾರವು ಅರೇಬಿಕ್/ಮದರಾಸಗಳನ್ನು ಆಧುನೀಕರಿಸಿ ಈ ಶಾಲೆಗಳಲ್ಲಿ ಆಧುನಿಕ ವಿಷಯಗಳಾದ ಆಂಗ್ಲ, ಸಮಾಜ, ವಿಜ್ಞಾನ, ಗಣಿತ ಬೋಧಿಸಲು ಶಿಕ್ಷಕರುಗಳ ವೇತನಕ್ಕಾಗಿ ಮಾಸಿಕ ಸಂಚಿತ ವೇತನ ರೂ. 3000/–ಗಳಂತೆ 12 ತಿಂಗಳ ವೇತನವನ್ನು ಬಿಡುಗಡೆ ಮಾಡಲಾಗಿರುತ್ತದೆ. 2006–07ನೇ ಸಾಲಿಗೆ 77.41 ಲಕ್ಷಗಳನ್ನು ಈ ಉದ್ದೇಶಕ್ಕಾಗಿ ಬಿಡುಗಡೆ ಮಾಡಿದ್ದು, ಅವುಗಳಲ್ಲಿ 53.20 ಲಕ್ಷಗಳನ್ನು ಖರ್ಚು ಮಾಡಲಾಗಿದೆ.

ಇದನ್ನು ರಾಜ್ಯ ಸರ್ಕಾರ ಅನುಷ್ಠಾನಗೊಳಿಸಿ ಬಿಡುಗಡೆಯಾದ ಅನುದಾನವು ಯಾವ ಉದ್ದೇಶಕ್ಕೆ ಬಿಡುಗಡೆಯಾಗಿರುತ್ತದೆಯೋ ಅದೇ ಉದ್ದೇಶಕ್ಕೆ ಉಪಯೋಗಿಸಿಕೊಂಡು ಬಳಕೆ ಪ್ರಮಾಣ ಪತ್ರವನ್ನು ನೀಡಲಾಗುತ್ತಿದೆ.

ಬಿಡುಗಡೆಯಾದ ಅನುದಾನವನ್ನು ಅರೇಬಿಕ್ ಶಾಲಾ ಶಿಕ್ಷಕರ ವೇತನಕ್ಕಾಗಿ ನಿಗದಿಪಡಿಸಲಾಗಿದೆ.

ಈ) ಹೌದು.

ಉ) ಉದ್ಭವಿಸುವುದಿಲ್ಲ.

1082 ಶ್ರೀ ಈಶ್ವರ್ ಭೀಮಣ್ಣ ಖಂಡ್ರೆ (ಭಾಲ್ಕಿ) ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಯನ್ನು ದಯವಿಟ್ಟು ಉತ್ತರಿಸುವರೆ?

ಅ) ಬೀದರ್ ಜಿಲ್ಲೆಯ ಭಾಲ್ಕಿ ಇಂಜಿನಿಯರಿಂಗ್ ಕಾಲೇಜುಗಳಲ್ಲಿ ವಿದ್ಯಾಭ್ಯಾಸ ಮಾಡುತ್ತಿರುವ ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ವಿದ್ಯಾರ್ಥಿಗಳಿಗೆ ಕಳೆದ 3 ವರ್ಷಗಳ ಅವಧಿಯಲ್ಲಿ ಪ್ರತಿ ವರ್ಷ ಸಮಾಜ ಕಲ್ಯಾಣ ಇಲಾಖೆಯಿಂದ ಪ್ರತಿ ವಿದ್ಯಾರ್ಥಿಗೆ ಬಂದಿರುವ ಮತ್ತು ಬರಬೇಕಾಗಿರುವ ವಿದ್ಯಾರ್ಥಿ ವೇತನದ ಮೊತ್ತವೆಷ್ಟು; (ವಿದ್ಯಾರ್ಥಿವಾರು ವಿವರಗಳನ್ನು ಅಂಕಿ ಅಂಶಗಳಲ್ಲಿ ಒದಗಿಸುವುದು)

ಆ) ವಿದ್ಯಾರ್ಥಿ ವೇತನದ ಮೊತ್ತವನ್ನು ವಿದ್ಯಾರ್ಥಿಗಳಿಗೆ ನೀಡಲಾಗಿದೆಯೇ; ಹಾಗಿದ್ದಲ್ಲಿ 3 ವರ್ಷಗಳ ವಿವರಗಳನ್ನು ಒದಗಿಸುವುದು

ಇ) ಫೀ ಮರುಪಾವತಿ / ವಿದ್ಯಾರ್ಥಿ ವೇತನವನ್ನು ನೀಡದೆ ಇರಲು ಕಾರಣಗಳೇನು;